ಓ.ಎಸ್. ನಂಃ 15/2018 ಡಿ.ಡಬ್ಲ್ಯೂ (2) /ಪ್ರತಿವಾದಿ ನಂ.5

**ದಿನಾಂಕಃ 11-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ B.C.G ವಕೀಲರಿಂದಃ**

1. ನಾನು 7 ನೇ ಕ್ಲಾಸ್ ವರೆಗೆ ಶಾಲೆ ಕಲೆತಿದ್ದೇನೆ. ಈ ಕೇಸ್ ನಾನೇ ಹಾಕಿದ್ದೇನೆ. ಅಮರಾಪುರದ ಸರ್ವೆ ನಂ.21/ಇ1 ಕ್ಷೇತ್ರ 3 ಎಕರೆ 6 ಗುಂಟೆ ಪೈಕಿ ನಾನು 2 ಎಕರೆ ಜಮೀನು ದಿನಾಂಕಃ 02-11-2023 ರಂದು ನೊಂದಾಯಿತಿ ಖರೀದಿ ಪತ್ರದ ಮೂಲಕ ಖರೀದಿಸಿದ್ದೇನೆ ಅಂದರೆ ಸರಿ. ಅದು ನಾನು ಖರೀದಿಸಿದ ಸರ್ವೆ ನಂ.21/2 ಕ್ಷೇತ್ರ 2 ಎಕರೆ ಆಗಿದೆ ಅಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ R.A.No.22/2023 ಚಾಲ್ತಿಯಲ್ಲಿ ಇರುವಾಗ 3 ಲಕ್ಷ ರೂಪಾಯಿ ಕೊಟ್ಟು ಪ್ರತಿವಾದಿ ನಂ.1 ಕರಿಯಪ್ಪ ಮ್ಯಾದಿನೇರಿಯವರ ಕಡೆಯಿಂದ ಖರೀದಿಸಿದೆ ಅಂದರೆ ಸರಿ.

2. ಈ ಜಮೀನು ಖರೀದಿ ಮಾಡುವ ಪೂರ್ವ ನಾನು ಯಾವುದೇ ದಾಖಲಾತಿಗಳನ್ನು ಪರಿಶೀಲನೆ ಮಾಡಿಲ್ಲ. ನೇರವಾಗಿ ಖರೀದಿಸಿದ್ದೇನೆ ಅಂದರೆ ಸರಿ. ಸದರಿ ಆಸ್ತಿ ಯಾರಿಂದ ಯಾರಿಗೆ ಬಂತು ಅಂತಾ ನನಗೆ ಗೊತ್ತಿಲ್ಲ. ಖರೀದಿ ಮಾಡುವ ಪೂರ್ವ ವಾದಿ ಯಮನವ್ವ ಗೊಲ್ಲರ್ ಇವರು ಕೇಸ್ ಹಾಕಿದ ಕುರಿತು ನನಗೆ ಗೊತ್ತಿರಲಿಲ್ಲ.

3. ನನಗೆ ಈ ಜಮೀನು ಮಾರಾಟ ಮಾಡಿದ ಕರಿಯಪ್ಪನಿಗೆ ಅವರ ತಂದೆ ದ್ಯಾಮಪ್ಪ ಮ್ಯಾದಿನೇರಿ ಮರಣ ಹೊಂದಿದ ನಂತರ ಈ ಜಮೀನು ಕರಿಯಪ್ಪನಿಗೆ ಬಂದಿತ್ತು ಅಂದರೆ ಗೊತ್ತಿಲ್ಲ. ಸದರಿ ದ್ಯಾಮಪ್ಪ ಮ್ಯಾದಿನೇರಿ ವಾದಿ ಯಮನವ್ವ ಇವರಿಗೆ ತಂದೆಯ ತಂದೆ ಇದ್ದಾರೆ ಅಂದರೆ ಗೊತ್ತಿಲ್ಲ. ಕರಿಯಪ್ಪನ ಹೆಂಡತಿ ಮಕ್ಕಳನ್ನು ಸಹ ನಾನು ಖರೀದಿ ಮಾಡುವ ಕಾಲಕ್ಕೆ ವಿಚಾರಿಸಿಲ್ಲ. ಯಮನವ್ವನಿಗೆ ಇದು ಪಿತ್ರಾರ್ಜಿತ ಆಸ್ತಿ ಎನ್ನುವುದು ಸರಿ. ನಾನು ಖರೀದಿಸಿದ 2 ಎಕರೆ ಜಮೀನಿನಲ್ಲೂ ಸಹ ವಾದಿ ಯಮನವ್ವಳಿಗೆ ಸಮಾನವಾದ ಪಾಲು ಇದೆ ಅಂದರೆ ಗೊತ್ತಿಲ್ಲ.

4. ಯಮನವ್ವಳ ತಂದೆ ಕರಿಯಪ್ಪ ಮತ್ತು ನಾನು ಮಿಲಾಪೆಯಾಗಿ ಯಮನವ್ವಳಿಗೆ ಪಾಲ ಕೊಡವುದರಿಂದ ತಪ್ಪಿಸಲು ಖರೀದಿ ಪತ್ರ ಮಾಡಿದೆವು ಅಂದರೆ ಸರಿಯಲ್ಲ. ದಾವಾ

R.A.No.22/2023 ಚಾಲ್ತಿ ಕಾಲಕ್ಕೆ ನಾನು ಜಮೀನು ಖರೀದಿ ಮಾಡಿರುವುದರಿಂದ **Lispendence** ಅಪ್ಲೈ ಆಗುತ್ತದೆ ಅನ್ನುವುದು ಗೊತ್ತಿಲ್ಲ. ಈ ಆಸ್ತಿ ಖರೀದಿ ಮಾಡುವ ಪೂರ್ವ ನಾನು ಪೇಪರಿಗೆ ಹಾಕಿಸಿಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಹಿರಿಯ ವ್ಯವಹಾರ ನ್ಯಾಯಾಧೀಶರು, ಕೊಪ್ಪಳ.**